**ದಿನಾಂಕಃ 07.07.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ನಂ.3 ಮತ್ತು 7 ರಪರವಾಗಿ ಶ್ರೀ ಎನ್ ಕೆ ವಕೀಲರಿಂದ.**

ದಾವಾ ಶೆಡ್ಯೂಲ್ 1 ನೇ ಸ್ವತ್ತನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ನೋಡಿರುತ್ತೇನೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 1 ನೇ ಸ್ವತ್ತಿನಲ್ಲಿ ಅಡಿಕೆ ತೋಟ ಮತ್ತು ಸ್ವಲ್ಪ ಖಾಲಿ ಜಮೀನು ಇರುತ್ತದೆ ಅಂದರೆ ಸಾಕ್ಷಿ ಪೂರ್ವ ಅಡಿಕೆ ತೋಟ ಇರುತ್ತದೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 1 ನೇ ಸ್ವತ್ತನ್ನು ಯಾವಾಗ ಖರೀದಿ ಮಾಡಿರುತ್ತಾರೆ ಮತ್ತು ಅದರ ಕ್ರಯಪತ್ರವನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ 1996 ರಲ್ಲಿ ಖರೀದಿ ಮಾಡಿರುತ್ತಾರೆ ಆದರೆ ಕ್ರಯಪತ್ರ ನೋಡಿಲ್ಲ ಎನ್ನುತ್ತಾರೆ. ನನ್ನ ತಂದೆ ದಾವಾ ಶೆಡ್ಯೂಲ್ 1 ನೇ ಸ್ವತ್ತನ್ನು ಖರೀದಿ ಮಾಡಿದಾಗ ಅಡಿಕೆ ತೋಟ ಇರಲಿಲ್ಲ ಅಂದರೆ ಸಾಕ್ಷಿ ಸ್ವಲ್ಪ ಅಡಿಕೆ ಮತ್ತು ತೆಂಗಿನ ತೋಟ ಇತ್ತು ನಂತರ ನನ್ನ ತಂದೆ ಕೊಳವೆ ಬಾವಿ ತೆಗೆಸಿ ಪೂರ್ಣ ಅಡಿಕೆ ತೋಟ ಮಾಡಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆ ಮರಣ ಹೊಂದುವವರೆಗೂ ಅಡಿಕೆ ತೋಟವನ್ನು ಅವರೇ ನೋಡಿಕೊಂಡಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆಗೆ ವಯಸ್ಸಾದ ನಂತರ ನಾನು ಮತ್ತು ಉಳಿದ ಸಹೋದರ–ಸಹೋದರಿಯರು ನೋಡಿಕೊಂಡಿರುತ್ತೇವೆ ಎನ್ನುತ್ತಾರೆ. ರಘುರಾಂಭಟ್‌ರವರ ಹೆಣ್ಣು ಮಕ್ಕಳ ಪೈಕಿ ನಾನೊಬ್ಬಳೆ ಆನವಟ್ಟಿಯಲ್ಲಿ ವಾಸ ಇರುತ್ತೇನೆ ಅಂದರೆ ಸಾಕ್ಷಿ ನಾನು ಮತ್ತು 6 ನೇ ಪ್ರತಿವಾದಿ ವಾಸ ಇರುತ್ತೇವೆ ಎನ್ನುತ್ತಾರೆ. ತೊರವಂದ ಗ್ರಾಮದ ರಾಜೇಂದ್ರಪ್ಪರವರು ನಮ್ಮ ತೋಟವನ್ನು ಮತ್ತು ನಮ್ಮ ಮನೆ ಕೆಲಸವನ್ನು ಮಾಡುತ್ತಿದ್ದರು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ

ಎನ್ನುತ್ತಾರೆ. ರಾಸಜೇಂದ್ರರಪ್ಪರವರ ಪರಿಚಯ ನಿಮಗೆ ಇಲ್ಲ ಅಂದರೆ ಸರಿ. ರಾಜೇಂದ್ರಪ್ಪರವರು ನನ್ನ ತಂದೆಯೊಂದಿಗೆ ಹೆಚ್ಚಿನ ಒಡನಾಟವನ್ನು ಹೊಂದಿದ್ದರು ಮತ್ತು ನಮ್ಮ ಕುಟುಂಬದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ತೋಟದ ಪಕ್ಕದಲ್ಲೆ ರಾಜೇಂದ್ರಪ್ಪರವರ ಜಮೀನು ಇರುತ್ತದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಟಿ ವಿ ಯಸ್ ಲೂನಾ ಓಡಾಡಲು ಬಳಸುತ್ತಿದ್ದರು ಅಂದರೆ ಸಾಕ್ಷಿ ಮೊದಲು ಸೈಕಲ್ ಬಳಸುತ್ತಿದ್ದರು ಅನಂತರ ಲೂನಾ ಬಳಸುತ್ತಿದ್ದರು ಎನ್ನುತ್ತಾರೆ. ನಿಮ್ಮ ತಂದೆ ಲೂನಾದ ಮೂಲಕ ತೋಟಕ್ಕೆ ಹೋಗುವುದು–ಬರುವುದು ಮಾಡುತ್ತಿದ್ದರು ಅಂದರೆ ಸರಿ. ನನ್ನ ತಂದೆ ಮರಣ ಹೊಂದುವ ಪೂರ್ವದ 15 ದಿನಗಳವರೆಗೂ ಲೂನಾವನ್ನು ಓಡಾಡಲು ಉಪಯೋಗಿಸುತ್ತಿದ್ದರು ಅಂದರೆ ಸಾಕ್ಷಿ ನನ್ನ ತಂದೆಗೆ ಮರಣ ಹೊಂದುವ 6 ವರ್ಷಗಳ ಪೂರ್ವದಲ್ಲಿ ಪಾರ್ಶ್ವವಾಯು ಆಗಿ ತೋಟಕ್ಕೆ ಓಡಾಡುತ್ತಿರಲಿಲ್ಲ ಮನೆಯಲ್ಲೆ ಇದ್ದರು ಎನ್ನುತ್ತಾರೆ. ನಿಮ್ಮ ತಂದೆಗೆ ಪಾರ್ಶ್ವವಾಯು ಆದ ನಂತರ ಯಾರ ಜೊತೆ ವಾಸ ಇದ್ದರು ಅಂದರೆ ಸಾಕ್ಷಿ ನಮ್ಮ ಜೊತೆ ಮನೆಯಲ್ಲೆ ಇದ್ದರು ಎನ್ನುತ್ತಾರೆ. ನಿಮ್ಮ ತಂದೆಗೆ ನೀವು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೀರಾ ಅಂದರೆ ಸಾಕ್ಷಿ ಸಾಗರ ತಾಲ್ಲೂಕಿನ ಒಂದು ಹಳ್ಳಿಗೆ ಕರೆದುಕೊಂಡು ಹೋಗಿ ನಾಟಿ ಚಿಕಿತ್ಸೆ ಕೊಡಿಸಿರುತ್ತೇನೆ ಎನ್ನುತ್ತಾರೆ. ನಿಮ್ಮ ತಂದೆಗೆ ನೀವು ಚಿಕಿತ್ಸೆ ಕೊಡಿಸಿದ ಬಗ್ಗೆ ವೈದ್ಯಕೀಯ ದಾಖಲೆ ಇದೆಯಾ ಅಂದರೆ ಸಾಕ್ಷಿ ಇರುವುದಿಲ್ಲ ಎನ್ನುತ್ತಾರೆ. ನೀವು ನಿಮ್ಮ ತಂದೆಗೆ ನಾಟಿ ಔಷಧಿಯನ್ನು ಕೊಡಿಸುವುದನ್ನು ಬಿಟ್ಟರೆ ಬೇರೆ ಆಸ್ಪತ್ರೆಯಲ್ಲಿ ಏನಾದರೂ ಚಿಕಿತ್ಸೆ ಕೊಡಿಸಿರುತ್ತೀರಾ ಅಂದರೆ

ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ಮರಣ ಹೊಂದಿದ ಎಷ್ಟು ವರ್ಷಗಳ ನಂತರ ನಿಮ್ಮ ತಾಯಿ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ 5 ವರ್ಷಗಳ ನಂತರ ಎನ್ನುತ್ತಾರೆ. ನಿಮ್ಮ ತಾಯಿ ಅನಾರೋಗ್ಯದಿಂದ ಬಳಲುತ್ತಿರುವಾಗ ನೀವು ಏನಾದರೂ ಚಿಕಿತ್ಸೆ ಕೊಡಿಸಿರುತ್ತೀರಾ ಅಂದರೆ ಸಾಕ್ಷಿ ಕೊಡಿಸಿರುತ್ತೇನೆ ಎನ್ನುತ್ತಾರೆ. ನಿಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ವೈದ್ಯಕೀಯ ದಾಖಲೆಗಳು ಇವೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಆಸ್ಪತ್ರೆಯ ಖರ್ಚು-ವೆಚ್ಚವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಅಂದರೆ ಸಾಕ್ಷಿ ಅವರು ಆರೋಗ್ಯವಾಗಿರುತ್ತಾರೆ ಎನ್ನುತ್ತಾರೆ. 4 ನೇ ಪ್ರತಿವಾದಿಗೆ ನನ್ನ ತಂದೆ ಶಿವಮೊಗ್ಗದ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಕೊಡಿಸಿ ಮದುವೆ ಮಾಡಲು ಪ್ರಯತ್ನಪಟ್ಟಿರುತ್ತಾರೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಮಾನಸಿಕ ಖಾಯಿಲೆ ವಾಸಿಯಾಗದ ಕಾರಣ ಅವರು ಮದುವೆಯಾಗಿರುವುದಿಲ್ಲ ಅಂದರೆ ಸಾಕ್ಷಿ ಅವರೆ ಮದುವೆ ಬೇಡ ಎಂದು ಹೇಳಿರುತ್ತಾರೆ ಹಾಗಾಗಿ ಮದುವೆ ಮಾಡಿರುವುದಿಲ್ಲ ಎನ್ನುತ್ತಾರೆ. 3 ಮತ್ತು 7 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸ ಇರುತ್ತಾರೆ ಅಂದರೆ ಸಾಕ್ಷಿ ಎಲ್ಲರೂ ಒಟ್ಟಾಗಿ ವಾಸ ಇರುತ್ತೇವೆ ಎನ್ನುತ್ತಾರೆ. ದಾವಾ ಶೆಡ್ಯೂಲ್ ಆಸ್ತಿಗಳ ಪೈಕಿ ಯಾವ ಮನೆಯಲ್ಲಿ ಒಟ್ಟಾಗಿ ವಾಸ ಇರುತ್ತೀರಿ ಅಂದರೆ ಸಾಕ್ಷಿ ದಾವಾ ಶೆಡ್ಯೂಲ್ 5 ನೇ ಆಸ್ತಿಯಲ್ಲಿ ಎನ್ನುತ್ತಾರೆ. ನನ್ನ ತಂದೆ ದಾವಾ ಶೆಡ್ಯೂಲ್ 5 ನೇ ಆಸ್ತಿಯಲ್ಲಿ ಮನೆ ಕಟ್ಟಿಸಿರುತ್ತಾರೆ ಅಂದರೆ ಸರಿ. ದಾವಾ ಶೆಡ್ಯೂಲ್ 3 ನೇ ಆಸ್ತಿಯಲ್ಲಿ 3 ನೇ ಪ್ರತಿವಾದಿ ಆಸ್ತಿಯನ್ನು ಖರೀದಿ ಮಾಡಿ ಮನೆ ಕಟ್ಟಿಸಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 4

ನೇ ಆಸ್ತಿಯಲ್ಲಿ ಮನೆಯನ್ನು ಯಾರು ಕಟ್ಟಿಸಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆ ಕಟ್ಟಿಸಿರುತ್ತಾರೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 4 ನೇ ಆಸ್ತಿಯಲ್ಲಿ ಮನೆಯನ್ನು ಯಾವಾಗ ಕಟ್ಟಿಸಿರುತ್ತಾರೆ ಮತ್ತು ಅದರ ಗೃಹ ಪ್ರವೇಶ ಆಗಿರುತ್ತದೆಯಾ ಅಂದರೆ ಸಾಕ್ಷಿ ಮನೆ ಕಟ್ಟಿಸಿ 3 ವರ್ಷ ಆಗಿರುತ್ತದೆ ಗೃಹ ಪ್ರವೇಶವು ಆಗಿರುತ್ತದೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 4 ನೇ ಆಸ್ತಿಯಲ್ಲಿ ಮನೆ ಪೂರ್ಣಗೊಳ್ಳುವವರೆಗೂ ನಿಮ್ಮ ತಂದೆ ಉಸ್ತುವರಿ ಮಾಡಿರುತ್ತಾರಾ ಅಂದರೆ ಸಾಕ್ಷಿ ನನ್ನ ತಂದೆ ಜೀವಂತ ಇರುವವರೆಗೂ ಉಸ್ತುವರಿ ಮಾಡಿದ್ದರು ನಂತರ ನಾವೆಲ್ಲರೂ ಸೇರಿ ಮನೆ ಪೂರ್ಣಗೊಳಿಸಿರುತ್ತೇವೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 4 ನೇ ಆಸ್ತಿಯಲ್ಲಿರುವ ಮನೆಯನ್ನು ಪ್ರತಿವಾದಿ ನಂ.3 ರವರು ಪೂರ್ಣಗೊಳಿಸಿ ಗೃಹ ಪ್ರವೇಶ ಮಾಡಿ ವಾಸ ಇರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆ ಮತ್ತು ನಾವುಗಳೆಲ್ಲರೂ ಸೇರಿ ಆ ಮನೆಯನ್ನು ಕಟ್ಟಿಸಿರುತ್ತೇವೆ 3 ನೇ ಪ್ರತಿವಾದಿ ವಾಸ ಇರುತ್ತಾನೆ ಎನ್ನುತ್ತಾರೆ. ದಾವಾ ಶೆಡ್ಯೂಲ್ 4 ನೇ ಆಸ್ತಿಯಲ್ಲಿರುವ ಮನೆಯ ಗೃಹ ಪ್ರವೇಶ ಯಾವಾಗ ಆಗಿರುತ್ತದೆ ಅಂದರೆ ಸಾಕ್ಷಿ ಈಗ 4 ವರ್ಷಗಳ ಹಿಂದೆ ಎನ್ನುತ್ತಾರೆ. 3 ನೇ ಪ್ರತಿವಾದಿ ದಾವಾ ಶೆಡ್ಯೂಲ್ 4 ನೇ ಆಸ್ತಿಯಲ್ಲಿ ಇರುವ ಮನೆಯಲ್ಲಿ ವಾಸ ಇರುವ ಪೂರ್ವದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದರು ಅಂದರೆ ಸಾಕ್ಷಿ ಎಲ್ಲರೂ ಒಟ್ಟಾಗಿ ವಾಸ ಇದ್ದೇವು ಬಾಡಿಗೆ ಮನೆಯಲ್ಲಿ ಅವರು ವಾಸ ಇರಲಿಲ್ಲ ಎನ್ನುತ್ತಾರೆ. ನನ್ನ ತಂದೆ–ತಾಯಿ ಮರಣ ಹೊಂದುವವರೆಗೂ 3 ನೇ ಪ್ರತಿವಾದಿಯ ಜೊತೆ ವಾಸ ಇದ್ದರು ಅಂದರೆ ಸರಿಯಲ್ಲ. ನನ್ನ ತಂದೆ–ತಾಯಿ ಮರಣ ಹೊಂದುವವರೆಗೂ ದಾವಾ ಶೆಡ್ಯೂಲ್ 5 ನೇ ಆಸ್ತಿಯಲ್ಲಿರುವ ಮನೆಯಲ್ಲಿ ನಮ್ಮ ಜೊತೆ ವಾಸ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ

ಅಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವ 6 ದಿನಗಳ ಮುಂಚಿನವರೆಗೂ ಲೂನಾದಲ್ಲಿ ಓಡಾಡುತ್ತಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿ ಮರಣ ಹೊಂದುವವರೆಗೂ ಕೂಡ ಆರೋಗ್ಯವಾಗಿದ್ದರು ಅಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದುವ 5–6 ದಿನ ಮುಂಚೆ 3 ನೇ ಪ್ರತಿವಾದಿ ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ಚಿಕಿತ್ಸೆ ಸಂಬಧ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ನನ್ನ ತಂದೆಯ ಚಿಕಿತ್ಸೆಯ ವೆಚ್ಚವನ್ನು 3 ನೇ ಪ್ರತಿವಾದಿ ಭರಿಸಿರುತ್ತಾರೆ ಅಂದರೆ ಸಾಕ್ಷಿ ಎಲ್ಲರೂ ಒಟ್ಟಾಗಿ ಭರಿಸಿರುತ್ತೇವೆ ಎನ್ನುತ್ತಾರೆ. ನಿಮ್ಮ ತಂದೆಯ ಚಿಕಿತ್ಸೆಯ ವೆಚ್ಚವನ್ನು ನೀವಾಗಲಿ, ಪ್ರತಿವಾದಿ ನಂ.2 ಅಥವಾ 4 ರಿಂದ 7 ನೇ ಪ್ರತಿವಾದಿಯಾಗಲಿ 3 ನೇ ಪ್ರತಿವಾದಿಗೆ ಕೊಟ್ಟಿರುತ್ತೀರಾ ಅಂದರೆ ಸಾಕ್ಷಿ ಅವರೇ ಆಸ್ತಿಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಹಾಗಾಗಿ ಅವರೆ ಭರಿಸಿರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆ ಜೀವಂತ ಇದ್ದಾಗ ಅವರು ಮಾಡುವ ವ್ಯವಹಾರಗಳ ಬಗ್ಗೆ ಪುಸ್ತಕದಲ್ಲಿ ಬರೆಯುತ್ತಿದ್ದರು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.